ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ,
ಚಿಕ್ಕಮಗಳೂರು.

ಎಂ.ವಿ.ಸಿ. ನಂ. 278/2024

ಪಿ.ಡಬ್ಲ್ಯೂ.1

ದಿನಾಂಕಃ 06.02.2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-

ನಾನು ಈ ದಿನ ನನ್ನ ಆದಾರ್ ಕಾರ್ಡ್ ನ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. (ಸದರಿ ದಾಖಲೆಯ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನೋಟರೈಸ್ಡ್ ಪ್ರತಿಯೊಂದಿಗೆ ತಾಳೆ ಮಾಡಿ ಸರಿ ಇದೆ ಎಂದು ಒಪ್ಪಿಕೊಂಡು ಮೂಲ ಪ್ರತಿಯನ್ನು ಸಾಕ್ಷಿದಾರರಿಗೆ ವಾಪಾಸು ಮಾಡಲಾಯಿತು). ಸದರಿ ದಾಖಯನ್ನು ನಿಪಿ 15 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕಾಗಿ ಪಾರ್ಥಿಸುತ್ತೇನೆ.

**ಪಾಟಿ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ನಾನು ನ್ಯಾನೋ ಕಾರ್ ನಲ್ಲಿ ಹೋಗುತ್ತಿದ್ದೆನು. ಆ ಕಾರ್ ನಲ್ಲಿ ಒಟ್ಟು 3 ಜನ ಹೋಗುತ್ತಿದ್ದೆವು. ಸದರಿ ದಿನ ನಮ್ಮ ವಾಹನ ಹೋಗುತ್ತಿದ್ದಾಗ ಎದುರುದಾರರ ವಾಹನ ನಮ್ಮ ಬಲಗಡೆಗೆ ಬಂದು ಗುದ್ದಿರುತ್ತಾರೆ. ಎದುರುದಾರರ ವಾಹನ ನಮ್ಮ ಎದುರುಗಡೆಯಿಂದ ಬಂದಿತ್ತು. ರಸ್ತೆಯ ಮಧ್ಯೆ ಭಾಗದಲ್ಲಿ ಎರಡು ಕಾರ್ ಗಳು ಪರಸ್ಪರ ಡಿಕ್ಕಿಯಾಗಿರುತ್ತವೆ ಎಂದರೆ ಸರಿ.

ಅಪಘಾತದ ನಂತರ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇನೆ. ನಂತರ ಕೆ.ಎಸ್ ಹೆಗ್ಗಡೆ ಆಸ್ಪತ್ರೆ ಮಂಗಳೂರಿಗೆ ಹೋಗಿರುತ್ತೇನೆ. ನಾನು ದಿಃ 18.06.2023 ರಿಂದ ದಿಃ 28.06.2023 ರವರೆಗೆ ಹಾಗೂ ದಿಃ 28.06.2023 ರಿಂದ ದಿಃ 05.07.2023 ರವರೆಗೆ ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆನು. ದೂರನ್ನು ನಮ್ಮ ಕಡೆಯಿಂದ ನೀಡಲಾಗಿತ್ತು. ದೂರನ್ನು ನಾನು ಖುದ್ದಾಗಿ ನೀಡಿದ್ದೆನೋ ಇಲ್ಲವೋ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ದಿಃ 05.07.2023 ರಲ್ಲಿ ಬಿಡುಗಡೆಯಾಗಿ ಬಂದ ನಂತರ ದಿಃ 05.09.2023 ರಂದು ನ್ಯಾಯಾಲಯದ ಮುಂದೆ ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅಪಘಾತವು ನಮ್ಮ ತಪ್ಪಿನಿಂದ ಆಗಿದ್ದರಿಂದ ನಾವು ದೂರನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಬಲಮೊಣಕೈಗೆ ಹಾಗೂ ಕಣ್ಣಿನ ಕೆಳಭಾಗಕ್ಕೆ, ಕೆನ್ನೆಗೆ ಶಸ್ತ್ರಚಿಕಿತ್ಸೆ ಆಗಿರುತ್ತದೆ. ಬೇರೆ ಶಸ್ತ್ರಚಿಕಿತ್ಸೆ ಆಗಿರುವುದಿಲ್ಲ, ಆದರೆ ಚಿಕಿತ್ಸೆಯನ್ನು ಪಡೆದಿರುತ್ತೇನೆ. ನನಗೆ 5 ಜನ ಮಕ್ಕಳಿದ್ದು, ನಾನು ಅವರ ಬಳಿ ಇರುತ್ತೇನೆ. ನನಗೆ ಯಾವುದೇ ದುಡಿಮೆ ಇರುವುದಿಲ್ಲ. ಅಪಘಾತಕ್ಕೂ ಮೊದಲು ನಾನು ಕೂಲಿ ಕೆಲಸವನ್ನು ಮಾಡುತ್ತಿದ್ದೆನು. ನಾನು ಕೂಲಿ ಕೆಲಸ ಮಾಡಿ ತಿಂಗಳಿಗೆ 20 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಯಸ್ಸಾಗಿದ್ದುದರಿಂದ ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಹಾಗೂ ನನ್ನ ಮಕ್ಕಳ ದುಡಿಮೆಯಿಂದ ಜೀವನ ನಡೆಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

MVC No. 278/2024
PW-1

ಮುಂದುವರೆದ ಚಿಕಿತ್ಸೆಗೆ ಆಸ್ಪತ್ರೆಗೆ ಹೋಗುತ್ತಿದ್ದೆನು. ನಾನು ನಿಪಿ 8 ಮತ್ತು 9 ನ್ನು ಸುಳ್ಳಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ರೂ. 3,00,000/- ಖರ್ಚು ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನನ್ನ ಮಗ ನಮ್ಮ ವಾಹನವನ್ನು ಚಲಾಯಿಸುತ್ತಿದ್ದನು. ಆತನಿಗೆ ಚಾಲನಾಪತ್ರ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಮ್ಮ ವಾಹನದ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ.

ನನಗೆ ಈಗ 85 ವರ್ಷ ವಯಸ್ಸು ಇರುತ್ತದೆ. ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಎದುರುದಾರರು ಪರಿಹಾರವನ್ನು ನೀಡಲು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲುಃ (1 ಮತ್ತು 2 ನೇ ಎದುರುದಾರರ ಪರ ವಕೀಲರು 3 ನೇ ಎದುರುದಾರರ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿದೆ).

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ,ಚಿಕ್ಕಮಗಳೂರು.

ಎಸ್‌ಆರ್‌ಃ

MVC No. 278/2024
PW-1